# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

***ಎಸ್‌ಸಿ.* 110/2017**

| | | |
|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಬಿ. ಶಿವರಾಮು | ***ಪ್ರಮಾಣ ಮಾಡಿಸಿದ ದಿನಾಂಕಃ*** |
| **ತಂದೆ ಹೆಸರು** | ಃ ಲೇಟ್. ಜವರೇಗೌಡ | **02.02.2021** |
| **ವಯಸ್ಸು** | ಃ 63 ವರ್ಷ | |
| **ವೃತ್ತಿ** | ಃ ನಿವೃತ್ತ ಎ.ಎಸ್.ಐ. | **ಪ್ರಾ.ಸಾ. ಃ 11** |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ. ಃ 18** |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

. ನಾನು *2014* ರಿಂದ *2017* ರತನಕ ವಿ.ವಿ.ಪುರಂ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ *23.12.2016* ರಂದು ಪ್ರಕರಣದ ತನಿಖಾಧಿಕಾರಿ ನನಗೆ ಮತ್ತು ಇತರೆ ಸಿಬ್ಬಂದಿಗೆ ಠಾಣಾ ಮೊ.ಸಂಖ್ಯೆ *142/2016* ರ ಆರೋಪಿಗಳ ತಲಾಷೆಗೆ ನೇಮಿಸಿದ್ದರು. ದಿನಾಂಕಃ *24.12.2016* ರಂದು ನಾನು ಮತ್ತು ಇತರೆ ಸಿಬ್ಬಂದಿಗಳು ಗೋಕುಲಂ, ಯಾದವಗಿರಿ ಮತ್ತು ಕಾಳಿದಾಸ ರಸ್ತೆ, ಒಂಟಿ ಕೊಪ್ಪಲು ಕಡೆ ಗಸ್ತು ಕರ್ತವ್ಯ ಮಾಡಿಕೊಂಡು ರಾತ್ರಿ *9.00* ರ ವೇಳೆಗೆ ಕಾಂಟೂರು ರಸ್ತೆಗೆ ತಲುಪಿದಾಗ ಬಾತ್ಮೀದಾರರು ಪ್ರಕರಣದ *5* ಜನ ಆರೋಪಿಗಳು ವಕೀಲರನ್ನು ಭೇಟಿ ಮಾಡಲು ಕಾಂಟೂರು ರಸ್ತೆಯ ಕ್ರಾಸ್ ಬಳಿ ಬರುವುದಾಗಿ ತಿಳಿಸಿದ ಮೇರೆಗೆ ನಾವುಗಳು ಕಾದು ನೋಡಲಾಗಿ *5* ಜನ ಆರೋಪಿಗಳನ್ನು ಸುತ್ತುವರೆದು ವಶಕ್ಕೆ ಪಡೆದು ಅವರ ಹೆಸರು, ವಿಳಾಸ ವಿಚಾರಿಸಲಾಗಿ ಹೇಮಂತ, ಸಂಜು, ಸಂದೇಶ, ಮೂರ್ತಿ ಮತ್ತು ದರ್ಮೇಂದ್ರ ಎಂದು ತಿಳಿದು ಬಂತು. ಅವರು ಪ್ರರಣದ ಬಗ್ಗೆ ಒಪ್ಪಿಕೊಂಡ ಕಾರಣ ಅವರನ್ನು ರಾತ್ರಿ *9.15* ರ ವೇಳೆಗೆ ಠಾಣೆಗೆ ಕರೆದುಕೊಂಡು ಬಂದು ಚಾ.ಸಾ. *47* ಅವರ ವರದಿಯೊಂದಿಗೆ ಪಿ.ಐ. ಅವರ ಸಮಕ್ಷಮ ಹಾಜರುಪಡಿಸಲಾಯಿತು.

ಅಂದು ವಶಕ್ಕೆ ಪಡೆದ *5* ಜನ ಆರೋಪಿಗಳ ಪೈಕಿ *2* ರಿಂದ *5* ಆರೋಪಿಗಳು ನ್ಯಾಯಾಲಯದ ಮುಂದೆ ಹಾಜರಿದ್ದು ಅವರನ್ನು ನಾನು ನೋಡಿ ಗುರುತಿದ್ದೇನೆ. *1* ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು : ಆರೋಪಿ 1 ರಿಂದ 6 ಪರ ಶ್ರೀ ಟಿ.ಪಿ.ಡಿ. ವಕೀಲರಿಂದಃ-**

ತನಿಖಾಧಿಕಾರಿ ಪಿ.ಐ. ಶ್ರೀ ರವಿ ಸಿ.ವಿ. ಅವರು ಆರೋಪಿಗಳ ತಲಾಷೆಗೆ ನೇಮಿಸಿದ್ದರು. ನಮ್ಮನ್ನು ಆರೋಪಿಗಳ ತಲಾಷೆಗೆ ನೇಮಿಸುವ ಬಗ್ಗೆ ತನಿಖಾಧಿಕಾರಿ ಪಿ.ಐ. ಶ್ರೀ ರವಿ ಸಿ.ವಿ. ಅವರು ಆರೋಪಿಗಳ ಪತ್ತೆ ಕಾರ್ಯವನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿಗಳ ತಲಾಷೆಗೆ ನೇಮಿಸಿದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದಿಸಿದ್ದರು ಮತ್ತು ಪ್ರತ್ಯೇಕ ಲಿಖಿತ ಮಾಹಿತಿ ನೀಡಿರಲಿಲ್ಲ.

ಅಂದು ನಾವು ಗೋಕುಲಂ, ಯಾದವಗಿರಿ ಮತ್ತು ಕಾಳಿದಾಸ ರಸ್ತೆ, ಒಂಟಿ ಕೊಪ್ಪಲು ಕಡೆ ಆರೋಪಿಗಳ ತಲಾಷೆಗೆ ಗಸ್ತು ಕರ್ತವ್ಯ ಮಾಡಿದ್ದೇವೆ. ಆರೋಪಿಗಳನ್ನು ವಶಕ್ಕೆ ಪಡೆದ ಸ್ಥಳದಲ್ಲಿ ಮಹಜರನ್ನು ಮಾಡಿಲ್ಲ. ಆರೋಪಿಗಳು ಕಾಂಟೂರು ರಸ್ತೆ ಕಾರ್ನರ್ ನಲ್ಲಿ ಇದ್ದರು. ಆರೋಪಿಗಳ ಚೆಹರೆ ಬಗ್ಗೆ ತನಿಖಾಧಿಕಾರಿ ನಮಗೆ ಮಾಹಿತಿ ಕೊಟ್ಟಿರಲಿಲ್ಲ. ಆರೋಪಿಗಳನ್ನು ವಶಕ್ಕೆ ಪಡೆಯುವ ಮೊದಲು ನಾನು ಆರೋಪಿಗಳನ್ನು ನೋಡಿರಲಿಲ್ಲ. ನಮ್ಮ ಜೊತೆ ಫಿರ್ಯಾದಿ ಅಥವಾ ಅವರ ಸ್ನೇಹಿತರು ಬಂದಿರಲಿಲ್ಲ. ಆರೋಪಿಗಳನ್ನು ವಿಚಾರಿಸಿದಾಗ ಪ್ರಕರಣದ ಬಗ್ಗೆ ಒಪ್ಪಿಕೊಂಡ ಕಾರಣ ಅವರನ್ನು ವಶಕ್ಕೆ ಪಡೆಯಲಾಯಿತು. ಆರೋಪಿಗಳನ್ನು ಪಿ.ಐ. ಅವರ ಸಮಕ್ಷಮ ಹಾಜರು ಮಾಡುವಾಗ ಚಾ.ಸಾ. *47* ಅವರು ವರದಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ವರದಿಗೆ ನಾನು ಸಹಿ ಮಾಡಿಲ್ಲ. ಆರೋಪಿಗಳನ್ನು ವಶಕ್ಕೆ ಪಡೆದಾಗ ಅಥವಾ ತನಿಖಾಧಿಕಾರಿ ಸಮಕ್ಷಮ ಹಾಜರು ಮಾಡಿದಾಗ ನನ್ನ ಸಮಕ್ಷಮ ಆರೋಪಿಗಳ ಅಂಗ ಶೋಧನೆ ಮಾಡಿಲ್ಲ.

**ಪಾಟೀ ಸವಾಲು : ಆರೋಪಿ 7 ಪರ ಶ್ರೀ ಜೆ.ವಿ.ಆರ್, ವಕೀಲರಿಂದಃ-**

.ಪಾಟೀ ಸವಾಲು ಇಲ್ಲ.

**<u>ಪಾಟೀ ಸವಾಲು ಃ ಆರೋಪಿ 8, 10, 11 ಮತ್ತು 12 ರ ಪರ ಶ್ರೀ ಜಿ.ಎಂ.ಎನ್. ವಕೀಲರಿಂದಃ-</u>**

.ಪಾಟೀ ಸವಾಲು ಇಲ್ಲ.

**<u>ಪಾಟೀ ಸವಾಲು ಃ ಆರೋಪಿ 9 ಪರ ಶ್ರೀ ಯು.ಎಸ್. ವಕೀಲರಿಂದಃ-</u>**

.ಪಾಟೀ ಸವಾಲು ಇಲ್ಲ.

***ಮರು ವಿಚಾರಣೆಃ- ಇಲ್ಲ.***

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು.***